ದೂರವಾಣಿ / ಫ್ಯಾಕ್ಸ್ : 080-2793 4470
080-2793 5412

URL : www.hoskote-pa.in
e-mail : hosakote.pa@gmail.com

# ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562 114, ಬೆಂಗಳೂರು (ಗ್ರಾ) ಜಿಲ್ಲೆ.

ಸಂಖ್ಯೆ: ಹೊಯೋಪ್ರಾ/ಸಿ.ಸಿ/77/2016–17

ದಿನಾಂಕ: 05.07.2017

## ಪ್ರಾರಂಭಿಕ ಪ್ರಮಾಣ ಪತ್ರ

**ವಿಷಯ :** ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಅಜ್ಜಗೊಂಡನಹಳ್ಳಿ ಗ್ರಾಮದ ಸ. ನಂ. 50/3 ರಲ್ಲಿನ (ಹಳೆ ಸ.ನಂ. 50) 02 ಎಕರೆ ವಿಸ್ತೀರ್ಣದ ಜಮೀನಿಗೆ ಅನುಮೋದನೆಯಾದ ವಸತಿ ಉದ್ದೇಶದ ಏಕ ನಿವೇಶನ ನಕ್ಷೆಯಲ್ಲಿನ ಮುತ್ಸಂದ್ರ ಗ್ರಾಮಪಂಚಾಯಿತಿ ವ್ಯಾಪ್ತಿಯ ಅಜ್ಜಗೊಂಡನಹಳ್ಳಿ ಗ್ರಾಮದ ಖಾತಾ ಸಂಖ್ಯೆ: 83/62 ರಲ್ಲಿ ಸ್ಟಿಲ್ಟ್, ನೆಲ ಮತ್ತು ಮೇಲಿನ 03 ಅಂತಸ್ತುಗಳ (Stilt+G+03 Floors) ವಸತಿ (ವಸತಿ ಸಮುಚ್ಚಯ) ಕಟ್ಟಡ ನಕ್ಷೆಗೆ ಅನುಮೋದನೆಯನ್ನು ನೀಡುವ ಬಗ್ಗೆ.

**ಉಲ್ಲೇಖ:** 1. ಈ ಕಛೇರಿಯ ಮಂಜೂರಾತಿ ಆದೇಶ ಸಂಖ್ಯೆ ಹೊಯೋಪ್ರಾ/ಎಲ್.ಎ.ಓ/35/2015–16, ದಿನಾಂಕ: 12.05.2016

2. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಮುತ್ಸಂದ್ರ ಗ್ರಾಮಪಂಚಾಯಿತಿ, ಹೊಸಕೋಟೆ ತಾಲ್ಲೂಕು ರವರ ಪತ್ರ ಸಂಖ್ಯೆ: ಮು.ಗ್ರಾ.ಪಂ.ನಂ.27/16–17, ದಿ: 02.07.2016.

3. ಅರ್ಜಿದಾರರು ಪ್ರಾಧಿಕಾರಕ್ಕೆ ಶುಲ್ಕ ಪಾವತಿಸಿದ ಕುರಿತು ಮನವಿ ದಿನಾಂಕ: 22.06.2017 ರೊಂದಿಗೆ Corporation Bank, Koramangala (0620) ರಲ್ಲಿನ ಡಿ. ಡಿ. ನಂ. 389015, ಡಿ. ಡಿ. ದಿನಾಂಕ: 17.06.2017, ರೂ. 10,09,200/–.

**ಪ್ರಸ್ತಾವನೆ**

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಂತೆ ಈ ಪ್ರಾಧಿಕಾರದಿಂದ ವಸತಿ ಉದ್ದೇಶದ ಏಕ ನಿವೇಶನ ನಕ್ಷೆಗೆ ಅನುಮೋದನೆ ನೀಡಲಾಗಿದೆ. ಉಲ್ಲೇಖ (2) ರಲ್ಲಿ ಸದರಿ ವಸತಿ ಉದ್ದೇಶದ ಏಕ ನಿವೇಶನ ನಕ್ಷೆಯಲ್ಲಿನ ವಸತಿ ಕಟ್ಟಡ ನಕ್ಷೆಗೆ (ವಸತಿ ಸಮುಚ್ಚಯ) ಅನುಮೋದನೆ ಕೋರಿ ಸಲ್ಲಿಸಲಾದ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಉಲ್ಲೇಖ (3) ರಂತೆ ಸಂಬಂಧಿಸಿದ ಶುಲ್ಕವನ್ನು ಅರ್ಜಿದಾರರು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ.

ಸದರಿ ನಿವೇಶನಕ್ಕೆ ಹಾಲಿ 12 ಮೀ. ಅಗಲದ ರಸ್ತೆಯನ್ನು 24.0 ಮೀ. ಅಗಲಕ್ಕೆ ವಿಸ್ತರಿಸಲಾದ ವರ್ತೂರಿನಿಂದ ಹಾರೋಹಳ್ಳಿಗೆ ಹೋಗುವ ರಸ್ತೆಯಿಂದ ಸಂಪರ್ಕವಿರುತ್ತದೆ. ಸದರಿ ವಸತಿ ಕಟ್ಟಡವು ಸ್ಟಿಲ್ಟ್, ನೆಲ ಮತ್ತು ಮೇಲಿನ 03 (Stilt+G+03 Floors) ಮೇಲಂತಸ್ತುಗಳನ್ನು ಹೊಂದಿದ್ದು, ಒಟ್ಟು 14.95 ಮೀ. ಎತ್ತರವಿದ್ದು, ಒಟ್ಟು 132 ವಸತಿ ಘಟಕಗಳನ್ನು ಕಟ್ಟಲು ಪ್ರಸ್ತಾವಿಸಲಾಗಿದೆ. ಸಲ್ಲಿಸಲಾದ ಕಟ್ಟಡ ನಕ್ಷೆಗಳು ಅನುಮೋದಿತ ವಲಯ ನಿಯಮಾವಳಿಗಳಿಗೆ ಅನುಗುಣವಾಗಿರುತ್ತದೆ.

ಆದ್ದರಿಂದ, ಮೇಲೆ ವಿವರಿಸಿರುವ ಅಂಶಗಳ ಮೇರೆಗೆ ವಸತಿ ಕಟ್ಟಡ ನಕ್ಷೆಗೆ (ವಸತಿ ಸಮುಚ್ಚಯ) ತಾಂತ್ರಿಕ ಅನುಮೋದನೆ ನೀಡುವ ಸಂಬಂಧ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: ಹೊಯೋಪ್ರಾ/ಸಿ.ಸಿ/77/2016–17, ದಿನಾಂಕ : 05.07.2017**

ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಅಜ್ಜಗೊಂಡನಹಳ್ಳಿ ಗ್ರಾಮದ ಸ. ನಂ. 50/3 ರಲ್ಲಿನ (ಹಳೆ ಸ.ನಂ. 50) 02 ಎಕರೆ ವಿಸ್ತೀರ್ಣದ ಜಮೀನಿಗೆ ಅನುಮೋದನೆಯಾದ ವಸತಿ ಉದ್ದೇಶದ ಏಕ ನಿವೇಶನದಲ್ಲಿನ ಮುತ್ಸಂದ್ರ ಗ್ರಾಮಪಂಚಾಯಿತಿ ವ್ಯಾಪ್ತಿಯ ಅಜ್ಜಗೊಂಡನಹಳ್ಳಿ ಗ್ರಾಮದ ಖಾತಾ ಸಂಖ್ಯೆ: 83/62 ರಲ್ಲಿ ಉದ್ದೇಶಿಸಿದ ಕಟ್ಟಡ ನಕ್ಷೆಯಲ್ಲಿ ಸ್ಟಿಲ್ಟ್, ನೆಲ ಮತ್ತು ಮೇಲಿನ 03 (Stilt+G+03 Floors) ಅಂತಸ್ತುಗಳಲ್ಲಿ ಒಟ್ಟು 132 ವಸತಿ ಘಟಕಗಳನ್ನೊಳಗೊಂಡ ಕಟ್ಟಡ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 15 ರನ್ವಯ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಕಾರ್ಯರೂಪಕ್ಕೆ ತರಲು ತಾಂತ್ರಿಕ ಅನುಮೋದನೆ ನೀಡಲಾಗಿದೆ.

**ಷರತ್ತುಗಳು:**

1. ಈಗ ನೀಡಿರುವ ಕಟ್ಟಡ ನಕ್ಷೆ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನದಿಂದ ಎರಡು ವರ್ಷಗಳವರೆಗೆ ಮಾತ್ರ ಅಂದರೆ ದಿನಾಂಕ: 05.07.2017 ರಿಂದ ದಿನಾಂಕ: 04.07.2019 ರವರೆಗೆ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ಕಟ್ಟಡ ಅಭಿವೃದ್ಧಿ ಕಾರ್ಯ ಪೂರ್ಣಗೊಳ್ಳದಿದ್ದಲ್ಲಿ, ಅನುಮತಿಯನ್ನು ನವೀಕರಿಸಿಕೊಳ್ಳತಕ್ಕದ್ದು.
2. ಅನುಮೋದಿತ ವಸತಿ ಉದ್ದೇಶದ ಏಕ ನಿವೇಶನದಲ್ಲಿ ಪ್ರಸ್ತಾವಿಸಲಾದ ಕಟ್ಟಡ ನಕ್ಷೆಗಳಿಗೆ ಅನುಗುಣವಾಗಿ ಹಾಗೂ ಈ ಪ್ರಾಧಿಕಾರದಿಂದ ನೀಡಲಾದ ಅನುಮೋದನೆಯಂತೆ ಕಟ್ಟಡಗಳನ್ನು ನಿರ್ಮಿಸತಕ್ಕದ್ದು. ಕಟ್ಟಡ ಕಾಮಗಾರಿ ಪೂರ್ಣಗೊಂಡ ನಂತರ ಈ ಕಛೇರಿಗೆ ಮಾಹಿತಿ ನೀಡತಕ್ಕದ್ದು.
3. ಸದರಿ ಜಮೀನಿನಲ್ಲಿ ಪ್ರಸ್ತಾಪಿಸಿರುವ ಕಟ್ಟಡಗಳ ನಿರ್ಮಾಣ ಸಂಬಂಧ ಸಲ್ಲಿಸಿರುವ ಮೆ॥ ಆಪ್ಟಿಮಾ ಸ್ಟ್ರಕ್ಚರ್ಸ್, ಬೆಂಗಳೂರು ರವರ ಸ್ಥಿರತೆ ಪ್ರಮಾಣ ಪತ್ರ (Structural Stability) ದಲ್ಲಿನ ನಿಯಮಗಳಿಗೆ ಬದ್ಧರಾಗಿರತಕ್ಕದ್ದು ಹಾಗೂ ನಿಯಮಗಳಂತೆ ಕಟ್ಟಡಗಳನ್ನು ನಿರ್ಮಿಸತಕ್ಕದ್ದು ಹಾಗೂ ಸದರಿ ಕಟ್ಟಡದ ಗುಣಮಟ್ಟಕ್ಕೆ ಅರ್ಜಿದಾರರು/ಅಭಿವೃದ್ಧಿದಾರರೇ ಹೊಣೆಗಾರರಾಗಿರುತ್ತಾರೆ.
4. ನಿವೇಶನದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೊದಲು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯಾದ ಮುತ್ಸಂದ್ರ ಗ್ರಾಮ ಪಂಚಾಯಿತಿ ವತಿಯಿಂದ ಪರವಾನಗಿ ಪಡೆಯತಕ್ಕದ್ದು.
5. **ಸದರಿ ಜಮೀನಿನಲ್ಲಿ ವಸತಿ ಕಟ್ಟಡ ಕಾಮಗಾರಿ ಕೈಗೊಳ್ಳುವ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರ ಪತ್ರ ಸಂಖ್ಯೆ: PCB/67/CNP/17/H1012, ದಿನಾಂಕ: 27.05.2017 ರನ್ವಯ ವಿಧಿಸಿರುವ ಎಲ್ಲಾ ಷರತ್ತುಗಳನ್ನು ತಪ್ಪದೇ ಅನುಸರಿಸತಕ್ಕದ್ದು.**
6. ಸದರಿ ಜಮೀನಿನಲ್ಲಿ ಯಾವುದೇ ಕಾಮಗಾರಿ ಕೈಗೊಳ್ಳುವ ಮೊದಲು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ರವರ ಪತ್ರ ಸಂಖ್ಯೆ: EEE/HKT/AEE(O)/AE-1/16-17/8986-88, ದಿನಾಂಕ: 17.03.2017 ರಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳನ್ನು ತಪ್ಪದೇ ಅನುಸರಿಸತಕದ್ದು.
7. ಸದರಿ ಯೋಜನೆಗೆ ಕುಡಿಯುವ ನೀರು ಪೂರೈಕೆ ಬಗ್ಗೆ ಮುತ್ಸಂದ್ರ ಗ್ರಾಮ ಪಂಚಾಯಿತಿಯ ಪತ್ರ ಸಂ: ಮು.ಗ್ರಾ.ಪಂ/176/2015–16, ದಿನಾಂಕ: 19.03.2016 ರಂದು ನೀಡಿರುವ ಪತ್ರದಂತೆ ಅಗತ್ಯ ಕ್ರಮ ಜರುಗಿಸಿ ನೀರು ಪೂರೈಕೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳುವುದು ಹಾಗೂ ಇತರೆ ಮೂಲಗಳಿಂದಲೂ ನೀರು ಪೂರೈಕೆಗೆ ಕ್ರಮ ಜರುಗಿಸುವುದು.
8. ಈ ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ ಕಟ್ಟಡ ನಕ್ಷೆಗಳಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು.
9. ಈ ನಿವೇಶನದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಹಾಗೂ ಹೊಸ ಸಸ್ಯಗಳನ್ನು ಬೆಳೆಸುವುದು.
10. ಸೋಲಾರ್ ವಾಟರ್ ಹೀಟರ್ ಅನ್ನು ಕಟ್ಟಡಗಳಲ್ಲಿ ಕಡ್ಡಾಯವಾಗಿ ಅಳವಡಿಸತಕ್ಕದ್ದು.
11. ಸದರಿ ನಿವೇಶನದಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ಅಂತರ್ ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
12. ಕಟ್ಟಡದ ನಿರ್ಮಾಣ ಕಾರ್ಯಕ್ಕೆ ಬಾಲ ಕಾರ್ಮಿಕರನ್ನು ಬಳಸುವುದನ್ನು ನಿಷೇಧಿಸಲಾಗಿದೆ ಹಾಗೂ ಕಾರ್ಮಿಕ ಇಲಾಖೆಯ ಆದೇಶಾನುಸಾರ ವಿಧಿಸಿರುವ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು. ಮತ್ತು ಕಟ್ಟಡ ಕಾಮಗಾರಿ ನಿರ್ಮಾಣಗಾರರಿಗೆ ಕಟ್ಟಡ ಕಾಮಗಾರಿಯ ಸಂದರ್ಭದಲ್ಲಿ ಅಗತ್ಯ ಸೌಕರ್ಯಗಳನ್ನು ಒದಗಿಸತಕ್ಕದ್ದು.
13. ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ರಸ್ತೆ, ಪಾದಚಾರಿ ಮಾರ್ಗಗಳಲ್ಲಿ ಶೇಖರಣೆ ಮಾಡಬಾರದು.
14. ಕಟ್ಟಡ ನಡು ಜಾಗ ಪ್ರದೇಶದ ಅಂಚಿನಲ್ಲಿ ಗಿಡ ಮರಗಳನ್ನು ಬೆಳೆಸತಕ್ಕದ್ದು.
15. ಒಂದು ಅನುಮೋದಿತ ಕಟ್ಟಡ ನಕ್ಷೆಯನ್ನು ಕಟ್ಟಡ ನಿರ್ಮಾಣ ಸ್ಥಳದಲ್ಲಿ ಅಧಿಕಾರಿಗಳ ಸಮೀಕ್ಷೆಗಾಗಿ ಪ್ರದರ್ಶಿಸತಕ್ಕದ್ದು.
16. ಸದರಿ ಪ್ರಸ್ತಾಪಿತ ಜಮೀನಿನಲ್ಲಿ ಹೊಸಕೋಟೆ ಯೋಜನಾ ಪ್ರಾಧಿಕಾರ/ಇತರೆ ಸರ್ಕಾರಿ ಇಲಾಖೆಗಳ ಜಮೀನುಗಳು/ಅನ್ಯ ಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದುಬಂದಲ್ಲಿ ಹಾಗೂ ಖರಾಬು ಜಮೀನುಗಳ ಅಳತೆಗಳು ಮತ್ತು ಅವುಗಳ ವಾಸ್ತವಿಕ ಸ್ಥಳಗಳ ವ್ಯತ್ಯಾಸ ಕಂಡುಬಂದಂತಹ ಸಂದರ್ಭದಲ್ಲಿ ಹೊಸಕೋಟೆ ಯೋಜನಾ ಪ್ರಾಧಿಕಾರವು ಅನುಮೋದಿತ ವಸತಿ ಉದ್ದೇಶದ ಏಕ ನಿವೇಶನ ನಕ್ಷೆಯನ್ನು/ಕಟ್ಟಡ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಸಂಪೂರ್ಣ ಅಧಿಕಾರ ಹೊಂದಿರುತ್ತದೆ.
17. ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸಲು ಬರುವುದಿಲ್ಲ.
18. ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
19. ಸದರಿ ಕಟ್ಟಡದಲ್ಲಿ ವಿಕಲಚೇತನ ಸ್ನೇಹಿ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳುವುದು.

ದೂರವಾಣಿ / ಫ್ಯಾಕ್ಸ್ : 080-2793 4470
080-2793 5412
URL : www.hoskote-pa.in
e-mail : hosakote.pa@gmail.com

# ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562 114, ಬೆಂಗಳೂರು (ಗ್ರಾ) ಜಿಲ್ಲೆ.

ಸಂಖ್ಯೆ: ಹೊಯೋಪ್ರಾ/ಸಿ.ಸಿ/77/2016–17 ದಿನಾಂಕ: 05.07.2017

20. ನೈಸರ್ಗಿಕವಾಗಿ ಹರಿಯುವ ನದಿ/ ಹಳ್ಳ /ಕೆರೆ ಮುಂತಾದವುಗಳಿಗೆ ಯಾವುದೇ ಮಲಿನ ನೀರನ್ನು ಬಿಡಬಾರದು.
21. ಶೌಚಕ್ಕೆ ಬಳಸುವ ತ್ಯಾಜ್ಯ ನೀರನ್ನು "ನಗರ ಮರುಬಳಕೆ ಮಾನದಂಡ" ದಂತೆ ಬಳಸುವುದು.
22. ಸಂಸ್ಕರಿತ ತ್ಯಾಜ್ಯ ನೀರನ್ನು ತೋಟಗಳಿಗೆ ಮತ್ತು ಶೌಚಕ್ಕೆ ಬಳಸುವುದು.
23. ಎಸ್.ಟಿ.ಪಿ. ಯಲ್ಲಿ ವಾಸನೆ ನಿಯಂತ್ರಿಸುವ ವ್ಯವಸ್ಥೆಯನ್ನು ಅಳವಡಿಸುವುದು.
24. ಕಟ್ಟಡ ನಿರ್ಮಿಸುವವರು ಆದಷ್ಟು ಕಡಿಮೆ ಹೊಗೆ ಹೊರಸೂಸುವ ಉತ್ತಮ ತಾಂತ್ರಿಕತೆಯನ್ನು ಬಳಸುವುದು.
25. ಸರ್ಕಾರದ ನಿರ್ದೇಶನದ ಮೇರೆಗೆ ಇನ್ನಾವುದೇ ಶುಲ್ಕಗಳನ್ನು ತುಂಬಲು ಪ್ರಾಧಿಕಾರವು ಸೂಚನೆ ನೀಡಿದಲ್ಲಿ ಅರ್ಜಿದಾರರು ಅಂತಹ ಶುಲ್ಕವನ್ನು ಪ್ರಾಧಿಕಾರಕ್ಕೆ ಪಾವತಿಸತಕ್ಕದ್ದು.
26. ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ವಿಧಿ 15 ರಂತೆ ಕ್ರಮ ಕೈಗೊಳ್ಳಲು ಪ್ರಾಧಿಕಾರಕ್ಕೆ ಅವಕಾಶ ಇರುವುದನ್ನು ನಿಮ್ಮ ಗಮನಕ್ಕೆ ತರಲಾಗಿದೆ.
27. ಪ್ರಾಧಿಕಾರವು ವಿಧಿಸುವ ಇನ್ನಾವುದೇ ಷರತ್ತುಗಳಿಗೆ ಬದ್ಧವಾಗಿರತಕ್ಕದ್ದು.
28. ಮೇಲ್ಕಂಡ ಯಾವುದೇ ಷರತ್ತುಗಳನ್ನು ಮತ್ತು ಇತರೆ ಯಾವುದೇ ಪ್ರಾಧಿಕಾರವು ವಿಧಿಸುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಕೂಡಲೇ ರದ್ದಾಗುವುದು.
29. **ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ವಯ ಈ ಅನುಮತಿಯನ್ನು ನೀಡಲಾಗಿದ್ದು, ವಸತಿ ಕಟ್ಟಡ ನಕ್ಷೆಗೆ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಸತಿ ಕಟ್ಟಡ ನಕ್ಷೆಗೆ ನೀಡಿರುವ ಅಂಗೀಕಾರ ತಾನಾಗಿಯೇ ರದ್ದುಗೊಳ್ಳುತ್ತದೆ.**

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಹಾಗೂ ಸದಸ್ಯ ಕಾರ್ಯದರ್ಶಿ ಹೊಸಕೋಟೆ ಯೋಜನಾ ಪ್ರಾಧಿಕಾರ,
ಹೊಸಕೋಟೆ.

<u>ಪ್ರತಿಯನ್ನು :</u>

1. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಮುತ್ಸಂದ್ರ ಗ್ರಾಮ ಪಂಚಾಯಿತಿ, ಅನುಗೊಂಡನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಗೆ ಕಟ್ಟಡ ನಕ್ಷೆಯ ನಾಲ್ಕು (4) ಪ್ರತಿಗಳೊಂದಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

2. ಶ್ರೀಮತಿ ನಿರ್ಮಲ ಕೋಂ ಎಂ. ಜಿ. ನಟರಾಜ್ ರವರ ಪರವಾಗಿ ಜಿ.ಪಿ.ಎ. ದಾರರಾದ ಮೆ॥ ಅಜ್ಜಗೊಂಡನಹಳ್ಳಿ ಹೋಮ್ಸ್ ಎಲ್.ಎಲ್.ಪಿ., ನಂ. 820, ಗೋಲ್ಡನ್ ಹೌಸ್, 80 ಅಡಿ ರಸ್ತೆ, 8ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–95 ರವರ ಮಾಹಿತಿಗಾಗಿ ಕಳುಹಿಸಿದೆ.